ದಿನ ಪೋಲೀಸರು ಆರೋಪಿಯನ್ನು ಠಾಣೆಗೆ ಕರೆಯಿಸಿದ್ದು ಆರೋಪಿಯ ಎದುರಲ್ಲೇ ಸಬ್ ಇನ್ಸ್‌ಪೆಕ್ಟರ್ ಶ್ರೀ ಕೆ. ಪಿ. ಚಂದ್ರಪ್ಪನವರು ದೂರಿನ ಬಗ್ಗೆ ವಿಚಾರಣೆ ಮಾಡುವ ಬದಲು ಅರ್ಜಿದಾರರನ್ನೇ ಗದರಿಸಿ ವಾಪಸ್ಸು ಮಾಡಿದ್ದರು. ಇದರಿಂದ ಉತ್ತೇಜನ ಪಡೆದ ಆರೋಪಿ ಶ್ರೀ ಪರಮೇಶ್ವರಪ್ಪನವರು ತನ್ನ ಬೆಂಬಲಿಗರೊಂದಿಗೆ ಅರ್ಜಿದಾರರ ಮತ್ತು ಅವರ ಗರ್ಭಿಣಿಯಾಗಿದ್ದ ಸೊಸೆ ಸಮೇತ ಇತರ ಕುಟುಂಬದ ಸದಸ್ಯರ ಮೇಲೆ ತೀವ್ರ ಹಲ್ಲೆ ಮಾಡಿದರೂ ಪೋಲೀಸಿನವರು ಯಾವುದೇ ತರಹದ ಕ್ರಮ ಕೈಗೊಂಡಿರುವುದಿಲ್ಲ. ಈ ಮೊದಲು ಅರ್ಜಿದಾರನ ಕುಡಿಯುವ ನೀರಿನ ಬಾವಿಗೆ ಸತ್ತ ಹಾವು ಮತ್ತು ಸಗಣಿಯನ್ನು ಹಾಕಿದ್ದು ಆ ನೀರು ವಿಷಪೂರಿತವಾಗಿದೆ. ಈ ಬಗ್ಗೆ ದೂರಿನ ಮೇಲೂ ಯಾವ ತರಹದ ಕ್ರಮ ಕೈಗೊಳ್ಳದಿರುವುದು ವಿಷಾದನೀಯ ಇಂತಹ ಅಮಾನುಷ ಕೃತ್ಯಗಳ ಬಗ್ಗೆ ಪೋಲೀಸ್ ಅಧಿಕಾರಿಗಳ ನಿರ್ಲಕ್ಷ್ಯತೆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಸ್ವಾಮಿ, ವಿವರಗಳನ್ನು ತರಿಸಿ, ಹೇಳಿಕೆ ಕೊಡುತ್ತೇನೆ.

ಪುತ್ತೂರು ಮಂಡಲಾಂತರ ಹಾದು ಹೋಗುವ ರಾಜ್ಯರಸ್ತೆ ಇಕ್ಕಟ್ಟಾಗಿರುವುದು.

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೇ, ಪುತ್ತೂರು ಪಟ್ಟಣದ ಮಂಡಲಾಂತರ ಹಾದು ಹೋಗುವ ರಾಜ್ಯ ರಸ್ತೆಯು ತುಂಬಾ ಇಕ್ಕಟ್ಟಾಗಿದ್ದು, ಅನೇಕ ಅಪಘಾತಗಳು ಈ ರಸ್ತೆಯಲ್ಲಿ ಪ್ರತಿ ದಿನ ನಡೆಯುತ್ತಾ ಇವೆ. ಬೈಪಾಸು ಮಾರ್ಗದ ಕಾಮಗಾರಿ ಕೆಲಸದ ಬಗ್ಗೆ ಸರಕಾರ ಕಳೆದ ಬಜೆಟ್‌ನಲ್ಲಿ ಒಂದು ಸಾವಿರ ಇಟ್ಟಿದ್ದು, ಈ ಸಲ ೪ ಲಕ್ಷ ರೂಪಾಯಿ ಮಾತ್ರ ಇಡಲಾಗಿದೆ. ಸಾಧಾರಣ ೫೦ ಲಕ್ಷ ರೂಪಾಯಿಯನ್ನು ಕಾಮಗಾರಿ ಕೆಲಸ ಒದಗಿದೆ. ಈ ಕೆಲಸವನ್ನು ಹೆಚ್ಚಿನ ಅದ್ಯತೆ ಮೇರೆಗೆ ಮಾನ್ಯ ಕಾಮಗಾರಿ ಮಂತ್ರಿಯವರು ತೆಗೆದುಕೊಂಡು ಇದರ ಮುಖಾಂತರ ನಡೆಯುವ ಅಪಘಾತ ಹಾಗೂ ಸಾರಿಗೆ ಸಂಚಾರಕ್ಕೆ ಉಂಟಾಗುವ ಅಡೆ ತಡೆಗಳನ್ನು ತಡೆಗಟ್ಟಲು ತುಂಬಾ ಅನುಕೂಲ ಮಾಡಿ ಕೊಡಬೇಕಾಗಿ ಸಚಿವರನ್ನು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

ಕೃಷ್ಣ ರಾಜಪೇಟೆಯಲ್ಲಿರುವ ಮೈನರ್ ಇರಿಗೇಷನ್ ಸ್ಪೆಷಲ್ ಸಬ್‌ಡಿವಿಜನ್ ನನ್ನು ಮುಂದುವರಿಸುವುದು.

ಶ್ರೀ ಕೃಷ್ಣ.—ಮಾನ್ಯ ಅಧ್ಯಕ್ಷರೇ, ಕೃಷ್ಣರಾಜಪೇಟೆಯಲ್ಲಿರುವ ಸ್ಪೆಷಲ್ ಮೈನರ್ ಇರಿಗೇಷನ್ ಸಬ್ ಡಿವಿಜನ್‌ನನ್ನು ಮುಂದುವರಿಸಲು ಸರಕಾರಿ ಆದೇಶ ಆಗದೇ ಇರುವುದರಿಂದ ಅಲ್ಲಿನ ಸಿಬ್ಬಂದಿಗೆ ಒಂದು ತಿಂಗಳ ಸಂಬಳ ಇರುವುದಿಲ್ಲ. ಅಲ್ಲಿ ಕೆಲಸಗಳೂ ಸಹ ಅಸ್ತವ್ಯಸ್ತವಾಗಿವೆ. ಸದರಿ ಸಬ್‌ಡಿವಿಜನ್‌ನ್ನು ಮುಂದುವರಿಸುವ ಬಗ್ಗೆ ಇನ್ನೂ ಮುಖ್ಯ ಇಂಜಿನಿಯರ್‌ರವರ ಕಛೇರಿಯಿಂದ ಸರಕಾರಕ್ಕೆ ವರದಿ ಬಂದಿಲ್ಲ ಎಂದು ತಿಳಿದು ಬಂದಿದೆ. ಕೂಡಲೇ ಈ ಸ್ಪೆಷಲ್ ಎಂ. ಐ. ಸಬ್ ಡಿವಿಜನ್ ಮುಂದುವರಿಸುವ ಆದೇಶವನ್ನು ಹೊರಡಿಸಿ ಅಲ್ಲಿರುವ ಸಿಬ್ಬಂದಿಗೆ ಸಂಬಳ ಸಾರಿಗೆಗಳನ್ನು ನೀಡಿ ಕಛೇರಿ ಕೆಲಸಗಳು ಮುಂದುವರಿಯುವಂತೆ ಮಾನ್ಯ ಲೋಕೋಪಯೋಗಿ ಸಚಿವರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಕಾಮಗಾರಿ ಮಂತ್ರಿಯವರಿಗೆ ಈ ವಿಚಾರವನ್ನು ತಿಳಿಸಿ, ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

ಗಮನ ಸೆಳೆಯುವ ಸೂಚನೆ

ಉಡುಪಿ ಮಾಧವಚಾರ್ ಅವರು ತಮ್ಮ ತೆಂಗಿನ ತೋಟದ ಬಾವಿಯಲ್ಲಿದ್ದ ಶವದ ಬಗ್ಗೆ ಪೋಲೀಸ್ ಠಾಣೆಯಲ್ಲಿ ದೂರಿತ್ತಿರುವುದು.

ಶ್ರೀಮತಿ ವನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ, ದಿನಾಂಕ ೧೪-೭-೮೫ರಂದು ೯-೩೦ರ ಸಮಯದಲ್ಲಿ ಉಡುಪಿ ಪೋಲೀಸ್ ಠಾಣೆಗೆ ಮಾಧವಚಾರ್ ಎಂಬುವರು ಬಂದು ತನ್ನ ತೆಂಗಿನ ತೋಟದ ಬಾವಿಯಲ್ಲಿ ಒಂದು ಶವ ಇರುವ ಬಗ್ಗೆ ದೂರು ನೀಡುವುದರ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ(ಗೃಹ ಮಂತ್ರಿಯವರು).—ದಿನಾಂಕ ೧೪-೭-೮೫ರ ಸಮಯದಲ್ಲಿ ಉಡುಪಿ ಪೋಲೀಸ್ ಠಾಣೆಗೆ ಮಾನವರಾಜ್ ಎಂಬುವರು ಬಂದು ತನ್ನ ತೆಂಗಿನ ತೋಟದ ಬಾವಿಯಲ್ಲಿ ಒಂದು ಶವ ಇರುವ ಬಗ್ಗೆ ದೂರನ್ನು ನೀಡಿದರು. ಆ ದೂರಿನ ಮೇರೆಗೆ ಉಡುಪಿಯ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ ೧೬೮/೮೫ ಕಲಂ ೧೭೪ ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಕುನ್ಹೆ ಒಂದನ್ನು ದಾಖಲು ಮಾಡಲಾಯಿತು. ಶವವನ್ನು ಬಾವಿಯಿಂದ ಹೊರಗೆ ತೆಗೆದು ಉಡುಪಿಯ ಜನರಲ್ ಆಸ್ಪತ್ರೆಗೆ ವೈದ್ಯಕೀಯ ಪರೀಕ್ಷೆಗಾಗಿ ಕಳುಹಿಸಲಾಯಿತು. ಬಾಹ್ಯ ಮತ್ತು ಒಳಗಾಯಗಳು ಶವದ ಮೇಲೆ ಕಂಡು ಬರದೇ ಇದ್ದುದರಿಂದ ಪೋಲೀಸರ ಸಲಹೆ ಮೇರೆಗೆ ವಿಸೀರಾವನ್ನು ರಾಸಾಯನಿಕ ತಜ್ಞರ ಪರೀಕ್ಷೆಗೆ ಒಳಪಡಿಸಲು ತೆಗೆದಿರಿಸಿ ಅದನ್ನು ಬೆಂಗಳೂರಿಗೆ ದಿನಾಂಕ ೨೦-೭-೮೫ ರಂದು ಕಳುಹಿಸಲಾಯಿತು. ವೈದ್ಯರು ತಮ್ಮ ವರದಿಯಲ್ಲಿ ಯಾವುದೇ ಒಳಗಾಯಗಳಾಗಲೀ ಅಥವಾ ಹೊರಗಾಯಗಳಾಗಲೀ ಕಂಡು ಬಂದಿಲ್ಲ ಎಂದು ಹಾಗೂ ಮೃತನ ಕಣ್ಣಿನ ಗುಳ್ಳೆಗಳನ್ನು ಜಲಚರ ಪ್ರಾಣಿಗಳು ತಿಂದಿವೆ. ಎಂದು ತಿಳಿಸಿದ್ದಾರೆ, ವೈದ್ಯರ ಅಂತಿಮ ವರದಿಯನ್ನು ನಿರೀಕ್ಷಿಸಲಾಗಿದೆ.

೨. ಶವವು ಯಾರದು ಎಂಬುದು ಪತ್ತೆಯಾಗಿಲ್ಲ. ಮೃತನ ಕಿವಿ ಚುಚ್ಚಿದೇ ಇರುವುದರಿಂದ ಮತ್ತು ಆತನ ಗುಪ್ತಾಂಗದ ಚರ್ಮವನ್ನು ಕತ್ತರಿಸಿದ್ದ ಗುರುತು ಇದ್ದ ಪ್ರಯುಕ್ತ ಆತನು ಮುಸ್ಲೀಮನೆಂದು ಪರಿಗಣಿಸಿ ಶ್ರೀ ಖುರ್ಷಿದ್, ಎಲ್.ಐ.ಸಿ. ಆಫೀಸರ್ ಹಾಗೂ ಸ್ಥಳೀಯ ಮುಸಲ್ಮಾನ್ ಸಂಘದ ಸದಸ್ಯ ಇವರಿಗೆ ಆ ಶವವನ್ನು ಒಪ್ಪಿಸಲಾಯಿತು, ಮುಸಲ್ಮಾನ್ ಮತದ ಪ್ರಕಾರ ಮೃತನ ಶರೀರವನ್ನು ಹೂಳಲಾಯಿತು.

೩. ಪೋಲೀಸರಿಗೆ ಆಗದಿರುವ ಕೆಲವು ಸ್ಥಳೀಯ ಜನರು ಪೋಲೀಸರೇ ಮೃತನನ್ನು ಕೊಂದು ಡಾಕ್ಟರ್ ಜೊತೆಗೂಡಿ ಆದು ಮುಳುಗಿ ಸತ್ತಿರುವ ಭಾವನೆ ಉಂಟಾಗುವ ರೀತಿ ಮಾಡಿದ್ದಾರೆಂದು ಸುದ್ದಿ ಹಬ್ಬಿಸಿದರು. ದಿನಾಂಕ ೨೪-೭-೮೫ರಂದು ಕೆಲವು ಕಾಂಗ್ರೆಸ್ ಪಕ್ಷದ ಜನರು, ಜಿಲ್ಲಾಧಿಕಾರಿಯವರು ದಕ್ಷಿಣ ಕನ್ನಡ ಮತ್ತು ಅಸಿಸ್ಟೆಂಟ್ ಕಮಿಷನರ್ ಕುಂದಾಪುರ ಇವರಿಗೆ ಅರ್ಜಿಗಳನ್ನು ಬರೆದು ಮೃತನನ್ನು ನಿಜವಾಗಿಯೂ ಕೊಲೆ ಮಾಡಲಾಗಿದೆ ಎಂದು ಮತ್ತು ಶವವನ್ನು ಮತ್ತೆ ಹೊರ ತೆಗೆದು ವೈದ್ಯಕೀಯ ಮರು ಪರಿಶೀಲನೆ ನಡೆಸಬೇಕೆಂದು ಕೋರಿದರು. ಕುಂದಾಪುರದ ಅಸಿಸ್ಟೆಂಟ್ ಕಮಿಷನರ್ ಅವರು ಕಲಂ ೧೭೪ ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಆಜ್ಞೆಯೊಂದನ್ನು ಹೊರಡಿಸಿ ಹಣವನ್ನು ಮತ್ತೆ ತೆಗೆದು ವೈದ್ಯಕೀಯ ಪರೀಕ್ಷೆ ನಡೆಸಬೇಕೆಂದು ಉಡುಪಿಯ ತಹಶೀಲ್ದಾರ್‌ರವರಿಗೆ ಆದೇಶ ನೀಡಿದರು. ದಿನಾಂಕ ೩೧-೭-೮೫ರಂದು ತಹಶೀಲ್ದಾರ್‌ರವರು, ಮಂತ್ರಿತರರು, ಮುಸಲ್ಮಾನ್ ಸ್ಮಶಾನಕ್ಕೆ ಹೋದರು ಸಲೀಂ ಎನ್ನುವ ಒಬ್ಬ ಡಾಕ್ಟರ್‌ರವರು ಈ ಬಗ್ಗೆ ಯಾವುದೇ ನೋಟೀಸ್ ನೀಡದೆ ಇರುವುದರಿಂದ ಮುಸಲ್ಮಾನರ ಮನಸ್ಸನ್ನು ನೋಯಿಸಿದೆ ಎಂದು ತಿಳಿಸಿದರು. ತರುವಾಯ ತಹಶೀಲ್ದಾರ್ ಅವರು ಒಂದು ನೋಟೀಸನ್ನು ಮುಸಲ್ಮಾನರಿಗೆ ಹೊರಡಿಸಿದರು. ದಿನಾಂಕ ೧-೮-೮೫ರಂದು ಶವವನ್ನು ಹೊರತೆಗೆಯಲಾಯಿತು. ಸಿವಿಲ್ ಸರ್ಜನ್ ಡಾಕ್ಟರ್ ನಾಗರಾಜಯ್ಯ ಮತ್ತು ಡಾಕ್ಟರ್ ಎಸ್. ಆರ್. ಭಂಡಾರಿಯವರು ಶವ ಪರೀಕ್ಷೆ ನಡೆಸಿದರು. ಅವರು ಕೂಡ ಯಾವುದೇ ಗಾಯಗಳನ್ನು ಗುರುತಿಸಲಿಲ್ಲ. ಶವದ ಮೆದುಳು ಭಾಗ, ಹೃದಯ ಭಾಗ ಮತ್ತು ಶವವನ್ನು ಮುಚ್ಚಿದ ಮಣ್ಣನ್ನು ರಾಸಾಯನಿಕ ಪರೀಕ್ಷೆಗೆ ಪೋಲೀಸ್ ಠಾಣೆಗೆ ದಿನಾಂಕ ೫-೮-೮೫ರಂದು ಕಳುಹಿಸಿ ನಂತರ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಪರೀಕ್ಷೆಗಾಗಿ ಕಳುಹಿಸಿ ಕೊಡಲಾಗಿದೆ ಮತ್ತು ಅದರ ಫಲಿತಾಂಶವನ್ನು ಕಾಯಲಾಗಿದೆ.

೪. ಮೃತನ ಫೋಟೋ ಒಂದನ್ನು ದಿನಾಂಕ ೨೬-೭-೮೫ರಂದು ಕನ್ನಡ ಪತ್ರಿಕೆ ಉದಯವಾಣಿಯಲ್ಲಿ ಪ್ರಕಟಿಸಲಾಯಿತು. ಇದುವರೆಗೂ ಅದನ್ನು ಯಾರೂ ಗುರುತಿಸಲಿಲ್ಲ. ಈ ಪ್ರಕರಣದಲ್ಲಿ ಯಾವುದೇ ಅನುಮಾನಕ್ಕೆ ಆಸ್ಪದವಿಲ್ಲ.

ಶ್ರೀಮತಿ ವನಜೋರಮಾ ಬಂಧ್ವರಾಜ್.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಚಿವರು ಈಗ ತಾನೇ ಉತ್ತರವನ್ನು ಹೇಳಿದ್ದಾರೆ ಆದರೆ ಇಲ್ಲಿ ಒಂದು ಸಂಶಯಕ್ಕೆ ಎಡೆಮಾಡಿಕೊಡುವ ಭಾವನೆ

ಎಂದರೆ ಬಾವಿಯಲ್ಲಿ ದೊರೆತ ಅಪರಿಚಿತ ಶವ ಎಂದು ತಿಳಿಸಿದ್ದಾರೆ. ಆದರೆ ನಮಗೆ ತೀಡ ಪ್ರಕಾರ ಪೋಲೀಸಿನವರು ಅದರ ಫೋಟೋ ತೆಗೆಯಲಿಲ್ಲ. ಫೋಟೋ ತೆಗೆದದ್ದು ಉದಯವಾಣಿ ವರದಿಗಾರರು ತಾ. ೧೭–೭–೧೯೮೫ ರಲ್ಲಿ ಕಂಡುಹಿಡಿದು ತಾ. ೨೭–೭–೮೫ ಎಂದರೆ ಇಷ್ಟು ತಡವಾಗಿ ಪ್ರಕಟಿಸಲಿಕ್ಕೆ ಕಾರಣವೇನು ? ಅಪರಿಚಿತ ಶವ ಎಂದು ತಿಳಿಸಿದ್ದೀರಿ. ಆ ಶವವನ್ನು ೨೪ ಗಂಟೆಗಳಲ್ಲಿ ಕೂಡ ಇಡದೆ ಅಷ್ಟು ಬೇಗನೆ ದಫನ್ ಬೇಗನೆ ದಫನ ಮಾಡಲಿಕ್ಕೆ ಕಾರಣವೇನು ? ಇದರಲ್ಲಿ ನನಗೆ ಏನು ಅನಿಸುತ್ತದೆ ಎಂದರೆ ತಾ. ೧೩–೭–೮೫ ರಂದು ಉದಯವಾಣಿಯಲ್ಲಿ 'ಸಿನಿಮಿಯಾ ದರೋಡೆ ಯತ್ನ ವಿಫಲ' ಎಂದು ಬಂತು. ಮಾನ್ಯ ಸಚಿವರಲ್ಲಿ ನಾನು ನಿಜಾಂಶ ತಿಳಿಯಲಿಕ್ಕೆ ಇಚ್ಛಿಪಡುತ್ತೇನೆ. ತಾ ೨೭–೭–೮೫ರಲ್ಲಿ ಅಪರಿಚಿತ ಶವದ ಬಗ್ಗೆ ಅಲ್ಲಿಯ ಜನರು ಸ್ವಲ್ಪ ಸಂಶಯ ವ್ಯಕ್ತಪಡಿಸಿದಾಗ ಶವದ ಫೋಟೋವನ್ನು ಮಸೀದಿಯವರು ಪ್ರಕಟಪಡಿಸಿದ್ದಾರೆ. ಪೋಲೀಸಿನವರು ಪ್ರಕಟಪಡಿಸಲಿಲ್ಲ. ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ ನೋಡಿದರೆ ಒಬ್ಬ ಪ್ರಭಾವಿ ವ್ಯಕ್ತಿಯಿಂದ ಈ ವ್ಯಕ್ತಿಯ ಈ ಕೊಲೆ ನಡೆದಿದೆ ಎಂದು ಗೊತ್ತಾಗುತ್ತದೆ. ರಾಜಕೀಯ ಮುಖಂಡರ ಬೆಂಗಾವಲಿನಿಂದ ಈ ಹತ್ಯೆ ನಡೆದಿದೆ. ಇದರ ಬಗ್ಗೆ ಸರಿಯಾದ ತನಿಖೆಯಾಗಬೇಕು ಎಂದು ನಾನು ಸಚಿವರ ಗಮನವನ್ನು ಸೆಳೆಯಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ. ರಾಚಯ್ಯ.—ಹಾಗೇನಾದರೂ ಆಗಿದ್ದರೆ ಅದನ್ನು ಸಿ ಓ.ಡಿಗೆ ಒಪ್ಪಿಸಿ ಅದನ್ನು ಎನ್ ಕ್ವೈರಿ ಮಾಡಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸಿ.ಓ.ಡಿ. ತನಿಖೆಗೆ ಒಪ್ಪಿಸುತ್ತೇನೆ ಎಂದು ತಾವೇ ಹೇಳಿದ್ದೀರಿ ಸಂತೋಷ, ೧೩ನೇ ತಾರೀಖಿಗೂ ಆಗಿರತಕ್ಕಂಥ ದರೋಡೆಗೂ ಸಿಕ್ಕಿರತಕ್ಕಂಥ ಶವಕ್ಕೂ ಸಂಬಂಧ ಬರುತ್ತದೆ ಎನ್ನುವ ಅನುಮಾನ ಅಲ್ಲಿ ಜನಜನಿತವಾಗಿ ಹೋಗಿದೆ. ಪತ್ರಿಕೆಗಳಲ್ಲಿ ಕೆಲವು ವಿಚಾರಗಳು ಕೂಡ ಬಂದಿವೆ. ಆ ದೃಷ್ಟಿಯಿಂದ ದರೋಡೆಯೇ ಬೇರೆ, ಈ ಶವದ ವಿಚಾರವೇ ಬೇರೆ ಇದೆ ಈ ಅಭಿಪ್ರಾಯ ಸರಿಯಾದುದಲ್ಲ. ಸಿ.ಓ ಡಿ. ತನಿಖೆಯನ್ನು ಮಾಡಿಸಬೇಕಾದರೆ ಸಂಶಯ ಇರತಕ್ಕಂಥ ವಿಚಾರ ಪ್ರಬಲವಾಗಿದೆ. ಬರೀ ಶವದ ಬಗ್ಗೆ ಸಿ ಓ.ಡಿಗೆ ಒಪ್ಪಿಗೆ ತನಿಖೆಯನ್ನು ಮಾಡಿಸುವುದಾದರೆ ಉಪಯೋಗವಿಲ್ಲ, ಕೆಲವು ವಿಪರಗಳನ್ನು ಮಾನ್ಯ ಸದಸ್ಯರಿಗೆ ಯವರು ಕಳುಹಿಸಿಕೊಡುತ್ತಾರೆ, ಇದರ ಬಗ್ಗೆ ಸಮಗ್ರವಾಗಿ ತನಿಖೆ ನಡೆಸುವಂತೆ ಸಿ.ಓ.ಡಿ.ಗೆ ತಿಳಿಸಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಏನೇನು ಅವರ ಹತ್ತಿರ ವಿಷಯಗಳು ಇವೆ. ಅವನ್ನೆಲ್ಲಾ ನನಗೆ ಬಿಟ್ಟರೆ ಅದನ್ನು ಕೂಡ ವಿಚಾರಣೆ ಮಾಡುವುದಕ್ಕೆ ಹೇಳುತ್ತೇನೆ

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಪ್ರಶ್ನೆಗಳಿಗೆ ನಮಗೆ ಉತ್ತರ ಬೇಕಾಗಿದೆ.

೧) ತಾರೀಖು ೧೪–೭–೧೯೮೫ರ ಉದಯವಾಣಿ ಪತ್ರಿಕೆಯ ೮ನೇ ಪುಟದಲ್ಲಿ ಪ್ರಕಟವಾದ ''ಉಡುಪಿಯಲ್ಲಿ ಸಿನಿಮಿಯಾ ದರೋಡೆ ಯತ್ನ ವಿಫಲ" ಎಂಬ ಶಿರೋನಾಮೆಯ ವರದಿಯನ್ನು ಪತ್ರಿಕೆಗ ಯಾರು ನೀಡಿದರು ?

೨) ತಾರೀಖು ೧೩–೭–೧೯೮೫ ರಂದು ಬೆಳಿಗ್ಗೆ ಸುಮಾರು ೧೧ ಘಂಟೆಗೆ ಶ್ರೀ ಪ್ರಭಾಕರ ಆಚಾರ್ಯ ಅವರು ಉಡುಪಿ ಟೌನ್ ಪೋಲೀಸ್ ಠಾಣೆಯಲ್ಲಿ ಬಂದು ಫಿರ್ಯಾದಿ ಕೊಟ್ಟದ್ದು ಕಂಡು ಬರುತ್ತದೆ ಅದರಲ್ಲಿ ಬರೆದ ವಿಷಯಕ್ಕೂ ಉದಯವಾಣಿ ಪತ್ರಿಕೆಯಲ್ಲಿ ಬಂದ ವಿಷಯಕ್ಕೂ ಬಹಳ ವ್ಯತ್ಯಾಸವಿದೆ. ಇದರಲ್ಲಿ ಯಾವುದು ಸರಿ ? ಈ ವ್ಯತ್ಯಾಸಕ್ಕೆ ಕಾರಣವೇನು ?

೩) ಶ್ರೀ ಪ್ರಭಾಕರ ಆಚಾರ್ಯ ಅವರು ತಾರೀಖು ೧೩–೭–೧೯೮೫ ರಂದು ಬೆಳಗಿನ ಜಾವ ೩.೩೦ ಗಂಟೆಗೆ ನಡೆದ ಘಟನೆಯನ್ನು ಕೇವಲ ಅರ್ಧ ಫರ್ಲಾಂಗು ದೂರದಲ್ಲಿರುವ ಟೌನ್ ಠಾಣೆಗೆ ದೂರು ನೀಡಲು ಸುಮಾರು ೭½ ಗಂಟೆಗಳಷ್ಟು ವಿಳಂಬ ಮಾಡಲು ಕಾರಣವೇನು ?

೪) ಆಚಾರ್ಯ ಅವರು ''ಗಾಳಿಯಲ್ಲಿ ಗುಂಡು ಹಾರಿಸಿದ್ದು" ಕಳ್ಳರ ''ಕಾರಿಗೆ ಡಿಕ್ಕಿ ಹೊಡೆದದು'' ಇತ್ಯಾದಿ ವಿಚಾರ ಪತ್ರಿಕಾ ಪ್ರಕಟಣೆಯಲ್ಲಿದ್ದಕ್ಕೂ ಎಫ್.ಐ.ಆರ್ ನಲ್ಲಿ ಇಲ್ಲವೇಕೆ ? ಅದನ್ನು ಪ್ರಭಾಕರ ಆಚಾರ್ಯ ಬರೆಯಿಸಿದ್ದೇ ? ಪೋಲೀಸರು ಇವರಿಗೆ ಸಲಹೆ ನೀಡಿದ್ದರೆ ?

೫) ಕಳವಾದ ಕಾರಿನಲ್ಲಿ ಸದ್ರಿ ಜೋರರು ಪರಾರಿಯಾಗಿದ್ದಾರಾದರೆ ಅದನ್ನು ಸದ್ರಿ ಪೋಲೀಸ್ ಅಧಿಕಾರಿ ಯಾಕೆ ತನಿಖೆ ಬಗ್ಗೆ ವಶಪಡಿಸಿಕೊಳ್ಳಲಿಲ್ಲ ?

೬) ಆಚಾರ್ಯರವರ ಕಾರಿಗೆ ಡಿಕ್ಕಿ ಹೊಡೆದು ಪೆಟ್ಟಾಗಿದ್ದರೆ, ಅದನ್ನೂ ಯಾಕೆ ಮಹಜರು ಮಾಡಲಿಲ್ಲ ? ಮುಂದಿನ ತನಿಖೆಗೆ ವಶಪಡಿಸಿಕೊಳ್ಳಲಿಲ್ಲ ?

೭) ಕಳವು ಮಾಡಿಕೊಂಡು ಬಂದ ಫಿಯೆಟ್ ಕಾರಿನ ಮೇಲಿದ್ದ ಬೆರಳಚ್ಚು ಮಗೈರೆಗಳನ್ನು ಯಾಕೆ ಪರೀಕ್ಷೆಗೆ ಗುರಿಪಡಿಸಲಿಲ್ಲ ?

೮) ಸದ್ರಿ ಕಳವಿನ ಕಾರನ್ನು ಅದರ ವಾರಸುದಾರರಿಗೆ ನೇರವಾಗಿ ಹಿಂದೆ ಕೊಡಲು ಪೋಲೀಸರಿಗೆ ಯಾವ ಅಧಿಕಾರ ?

೯) ಕಳವಿನ ಕಾರನ್ನು ಕೋರ್ಟಿಗೆ ಯಾಕೆ ಹಾಜರು ಪಡಿಸಲ್ಲಿಲ್ಲ ?

೧೦) ಸದ್ರಿ ಪ್ರಕರಣ ಕ್ರೈಂ ನಂಬ್ರ ೧೬೩–೮೫ ಎಂದು ಟೌನ್ ಠಾಣೆಯಲ್ಲಿ ದಾಖಲಾಗಿದ್ದು ಈ ವಿಚಾರದಲ್ಲಿ ಮುಂದಿನ ತನಿಖೆ ಏನಾಗಿದೆ ಎಂದು ತಿಳಿಯಲು ನಾಗರೀಕರು ಕುತೂಹಲ ಉಳ್ಳವರಾಗಿದ್ದಾರೆ ?

೧೧) ಮುಂದಿನ ತನಿಖೆ ಕುಂಠಿತವಾಗಲು ಕಾರಣವೇನು ? ಇದರಲ್ಲಿ ಕರ್ತವ್ಯ ಲೋಪ ವಾಗಿದೆಯೋ ?

೧೨) ಶ್ರೀ ಆಚಾರ್ಯ ತಾರೀಖು ೧೩–೭–೧೯೮೫ರ ಬೆಳಿಗ್ಗೆ ಬೇಗ ಫಿರ್ಯಾದಿ ನೀಡಿರಬೇಕು. ಅದನ್ನು ೧೧ ಗಂಟೆ ತನಕ ದಾಖಲಿಸಿಕೊಳ್ಳದೆ ಇರಲು ಕಾರಣವೇನು ?

೧೩) ಶ್ರೀ ಆಚಾರ್ಯ ಕೊಟ್ಟ ಪ್ರಥಮ ಫಿರ್ಯಾದಿ ಅವರ ಹಿತಕ್ಕೆ ವಿರೋಧ ಆಗಲು ಸಾಧ್ಯ ಎಂದು ಬಗೆದು ಪೋಲೀಸ್ ಅಧಿಕಾರಿ ಪ್ರತ್ಯೇಕ ಫಿರ್ಯಾದಿ ಬರೆಯಿಸಿದ್ದುದು ನಿಜವೇ ? ಸತ್ಯವನ್ನು ಮರೆಮಾಚಲು ಪೋಲೀಸ್ ಅಧಿಕಾರಿ ಪ್ರಯತ್ನಿಸಬಹುದೇ ?

೧೪) ಪೋಲೀಸರು ಕರ್ತವ್ಯ ಲೋಪ ಮಾಡಿ ತಮ್ಮ ತಪ್ಪನ್ನು ಮುಚ್ಚಲು ಶ್ರೀ ಆಚಾರ್ಯರಿಂದ ವಿಳಂಬಿತ ಎಫ್.ಐ.ಆರ್. ಪಡೆದರೇ ?

೧೫) ಅಥವಾ ಶ್ರೀ ಆಚಾರ್ಯರು ಗೈದ ಅಪರಾಧವನ್ನು ಮುಚ್ಚಿಡಲು ಪೋಲೀಸ್ ಅಧಿಕಾರಿ ಗಳು ಶಾಮೀಲು ಆದರೇ–ವಿಳಂಬಿತ ಎಫ್.ಐ.ಆರ್ ಏನನ್ನು ಸೂಚಿಸುತ್ತದೆ ?

೧೬) ತಾರೀಖು ೧೪–೭–೧೯೮೫ರ ಉದಯವಾಣಿ ಪತ್ರಿಕೆಯ ವರದಿಯನ್ನು ಓದಿದ ಉಚ್ಚ ಪೋಲೀಸ್ ಅಧಿಕಾರಿಗಳು ಸ್ಥಳೀಯ ಪೋಲೀಸ್ ಅಧಿಕಾರಿಗಳನ್ನು ವರದಿಯ ಸತ್ಯಾಸತ್ಯತೆಯ ಬಗ್ಗೆ ಕೇಳಿದುದ್ದು ನಿಜವೇ ?

೧೭) ಸ್ಥಳೀಯ ಅಧಿಕಾರಿ ಉದಯವಾಣಿಯ ಸಿಟಿ ರಿಪೋರ್ಟರ್ ಶ್ರೀ ಗಣಪತಿ ಭಟ್ಟರನ್ನು ತರಾಟೆಗೆ ತೆಕೊಂಡಿದ್ದು ನಿಜವೇ ?

ಈ ಪ್ರಕರಣದಲ್ಲಿ ಹೇರಳ ಹಣ ಲಂಚ ರೂಪದಲ್ಲಿ ತೆರಲಾಗಿದೆ ಎಂದು ತಿಳಿದಬಂದಿದೆ. ಈ ಬಗ್ಗೆ ಕೂಡ ಸಮಗ್ರ ತನಿಖೆ ಆಗಬೇಕು.

ಪ್ರಕರಣದ ಗಹನತೆ, ಪ್ರಭಾವೀ ವ್ಯಕ್ತಿಗಳ ಭಾಗಿತ್ವ ಈ ಕಾರಣದಿಂದ ಉಚ್ಚ ಅಧಿಕಾರಿ ಸ್ವತಃ ತನಿಖೆ ನಡೆಸಬೇಕು. ತಪ್ಪಿದಲ್ಲಿ ಸಿ.ಬಿ.ಐ. ತನಿಖೆ ನಡೆಯಬೇಕು.

ಅಧ್ಯಕ್ಷರು.—ಸಚಿವರು ಇದನ್ನು ಗಣನೆಗೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ತಾವು ದಯವಿಟ್ಟು ಕಾಳಿತುಕೊಳ್ಳಿ. ಸಿ.ಓ.ಡಿ. ತನಿಕೆಯನ್ನು ಮಾಡಿಸುತ್ತೇನೆ ಎಂದೂ ಹೇಳಿದ್ದಾರೆ. ನೀವು ಓದುವುದನ್ನು ಅವರಿಗೆ ಕಳುಹಿಸಿಕೊಡಿ.

ಶ್ರೀ ಬಿ. ಎಂ. ಇದಿನಬ್ಬ.—ಈ ರೀತಿಯ ಕೊಲೆಯಾಗಿದೆ, ಮಾನ್ಯ ಮಂತ್ರಿಗಳು ಕೊಟ್ಟ ಉತ್ತರ ದಲ್ಲಿ ಯಾವುದೂ ಇಲ್ಲ. ಅವರಿಗೆ ನೆನಪು ಮಾಡಿಕೊಡುವುದಕ್ಕೋಸ್ಕರ ಇದನ್ನೆಲ್ಲಾ ಓದಿದೆ. ಈ ಕೊಲೆಯ ವಿಚಾರದಲ್ಲಿ ಸಚಿವರು ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಶವ ಪರೀಕ್ಷೆ ಮಾಡಿದಾಗ ಆಲ್ಲಿ ಏನೂ ಇರಲಿಲ್ಲ. ಆಮೇಲೆ ಪತ್ರಿಕೆಗಳಲ್ಲಿ ಫೋಟೋ ಬಂದಿದೆ, ಇಂಥದವರದ್ದೇ ಶವ ಎಂದು ಗುರುತಿಸಲಿಕ್ಕೆ ಯಾರೂ ಬರಲಿಲ್ಲ. ಇದೆಲ್ಲಾ ಮುಗಿದಮೇಲೆ ಕೇಳುವುದಕ್ಕೆ ಮುಂಚಿತವಾಗಿ ಇವಕ್ಕೆ ಸಂಬಂಧಪಟ್ಟ ವಿಷಯಗಳು ನಿಮ್ಮ ಹತ್ತಿರ ಏನಾದರೂ ಇದ್ದರೆ ನನಗೆ ಕೊಡಿ. ಮತ್ತೊಮ್ಮೆ ಸಿ.ಓ.ಡಿ.ಗೆ ಕಳಿಹಿಸಿ ನಿಜಾಂಶ ಕಂಡುಹಿಡಿದು ಪ್ರಕರಣವನ್ನು ಪತ್ತೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಸವರಾಜ್.—ಉದಯವಾಣಿ ಪತ್ರಿಕೆಯಲ್ಲಿ ೧೩ನೇ ತಾರೀಖು ದರೋಡೆ ಯತ್ನ ಎಂದು ಪ್ರಕಟವಾಯಿತು. ಆದರೆ ದರೋಡೆ ಮಾಡಲು ಬಂದ ಕಾರು ನಂ. ಕೆ.ಇ.೧. ೪೬೭೭. ದರೋಡೆ ಆಗಿರತಕ್ಕಂಥ ಕಾರಿಗೂ ಮಾಲೀಕರ ಕಾರಿಗೂ ಡಿಕ್ಕಿ ಹೊಡೆಯಿತು ಎನ್ನುವ ಅಂಶ ಬಂದಿದೆ. ಮತ್ತೆ ಪೋಲೀಸ್ ಅಧಿಕಾರಿಗಳು ಆ ಕಾರನ್ನು ಏತಕ್ಕೆ ಸೀಜ್ ಮಾಡಲಿಲ್ಲ ? ಈ ದರೋಡೆ ನಡೆದ ೧೬ನೇ ತಾರೀಖಿನಲ್ಲಿ ಇನ್ನೊಂದು ವಿಚಾರ ಪತ್ರಿಕೆಯಲ್ಲಿ ಬಂತು. ಅಪರಿಚಿತ ಶವ ಒಂದು ಕಡೆ ಬಾವಿಯಲ್ಲಿ ಇದೆ ಎಂದು. ನಂತರ ಒಂದು ವಾರದಲ್ಲಿ ಆ ವ್ಯಕ್ತಿಯ ಫೋಟೋ ಹಾಕಿದ್ದಾರೆ. ಈ ಎಲ್ಲಾ ವಿಚಾರವನ್ನು ನೋಡುವಾಗ ಪ್ರಭಾವಿಶಾಲಿ ವ್ಯಕ್ತಿ ಒಬ್ಬರು, ಇವರಲ್ಲಿ ಚಿನ್ನದ ವ್ಯಾಪಾರ, ಹಣದ ವ್ಯಾಪಾರ, ಕಳ್ಳನೋಟಿನ ವ್ಯಾಪಾರ ಮಾಡಿಕೊಂಡು ಬಂದಂತಹ ವ್ಯಾಪಾರಸ್ಥರನ್ನು ಕೊಲೆ ಮಾಡಿ ಬಾವಿಗೆ ಹಾಕಿದ್ದಾರೆ. ಇದರ ಬಗ್ಗೆ ಕಾಂಗ್ರೆಸ್ (ಐ) ಕಾರ್ಯಕರ್ತರು ಕಂಪ್ಲೇಂಟ್ ಮಾಡಿದ್ದಾರೆ ಎಂದು ಹೇಳಿದ್ದಾರೆ. ಮಾಜಿ ಎಂ.ಎಲ್.ಎ. ಶಾಸಕರು ಮತ್ತು ಕೆಲವು ಗೂಂಡಾಗಳು ಮತ್ತು ಊರಿನ ಜನರೆಲ್ಲಾ ಸೇರಿ ಅಸಿಸ್ಟೆಂಟ್ ಕಮಿಷನರ್‌ಗೆ ದೂರು ಕೊಟ್ಟಿದ್ದಾರೆ. ಕೆಲವು ವಾರದ ನಂತರ ಶವದ ಪುನರ್ ಪರಿಶೀಲನೆ ಮಾಡಿದಾಗ ಆದರಲ್ಲಿ ಕೆಲವು ವ್ಯತಾಸಗಳು ಕಂಡು ಬಂದವು. ಮೊದಲನೆಯ ಪೋಸ್ಟ್ ಮಾರ್ಟನ ವರದಿಯಲ್ಲಿ ಕೆಲವು ಗಾಯಗಳು ಕಂಡು ಬಂದಿದ್ದವು. ಪೋಸ್ಟ್ ಮಾರ್ಟಂ ಮಾಡುವಾಗ ಮೂರು ಇಂಚಿನ ಗಾಯಗಳು ಆಗಿದ್ದುದು ಕಂಡು ಬಂದಿದೆ. ಈ ಅಂಶ ಮಂತ್ರಿಗಳಿಗೆ ಗೊತ್ತಿಲ್ಲ. ಇದನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡಿರುವುದರಿಂದ ಇದನ್ನು ತಾವು ಸಿ.ಓ.ಡಿ. ತನಿಖೆಗೆ ಒಪ್ಪಿಸಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ನಾನು ಮೊದಲೇ ಹೇಳಿದ್ದೇನೆ. ಮಾಹಿತಿ ಇದ್ದರೆ ಕೊಡಿ. ಅದನ್ನು ಸಿ.ಓ.ಡಿ.ಗೆ ಒಪ್ಪಿಸಿ ತನಿಖೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇದರಲ್ಲಿ ಯಾರನ್ನು ಮುಚ್ಚ ತಕ್ಕಂಥ ಪ್ರಶ್ನೆ ಇಲ್ಲ. ನಿಜವಾಗಿ ತಪ್ಪಿತಸ್ಥರು ಯಾರಿದ್ದಾರೆ, ಅವರನ್ನು ಕಂಡುಹಿಡಿದು ಅವರಿಗೆ ಕಾನೂನುಪ್ರಕಾರ ಶಿಕ್ಷೆಯನ್ನು ಕೊಡಿಸುವ ಉದ್ದೇಶದಿಂದ ನಾನು ಹೇಳಿದ್ದೇನೆ. ಇದನ್ನು ಸಿ.ಓ.ಡಿ.ಗೆ ರೆಫರ್ ಮಾಡಿಸುತ್ತೇನೆ ಎಂದು ಹೇಳುತ್ತೇನೆ.

(ii) ಯಳನಾಡು ಗ್ರಾಮದಲ್ಲಿ ತೆಂಗಿನ ಬೆಳೆಗಳ ನಾಶದಿಂದ ರೈತರಿಗೆ ಪರಿಹಾರ ನೀಡುವುದರ

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೇ ತೆಂಗಿನ ಬೆಳೆಗಳ ನಾಶದಿಂದಾಗಿ ಹಾಗೂ ತೊಂದರೆಗೀಡಾದ ರೈತರುಗಳಿಗೆ ಪರಿಹಾರ ನೀಡದಿರುವುದರಿಂದ ಯಳನಾಡು ಗ್ರಾಮದ ರೈತರಿಗೆ ಉಂಟಾಗಿರುವ ತೊಂದರೆಯ ವಿಚಾರದ ಬಗ್ಗೆ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳ ಪರವಾಗಿ) —ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರು ಬಾರದೇ ಇದ್ದುದರಿಂದ ಅವರ ಹೇಳಿಕೆಯನ್ನು ನಾನು ಸರ್ಕಾರದ ಪರವಾಗಿ ಸಭೆಯ ಮುಂದೆ ಇಡುತ್ತೇನೆ.

ಹಿರಿಯೂರು ತಾಲ್ಲೂಕಿನ ವಾಣಿವಿಲಾಸ ಸಾಗರ ಜಲಾಶಯ ೧೯೮೫ ರಲ್ಲಿ ಒಣಗಿ ಹೋಗಿಲ್ಲ ಇದರಲ್ಲಿ ಸಿಲ್ ಮಟ್ಟದಿಂದ ಮೇಲೆ ಸುಮಾರು ೧೧ ಅಡಿ ನೀರು ಹಾಲಿ ಇದೆ ಮತ್ತು ಜನವರಿ ೮೫ ರಿಂದ ಜೂನ್ ೮೫ ರವರೆಗೆ ಬೆಳೆಗಳಿಗೆ ನೀರನ್ನು ಸರಬರಾಜು ಮಾಡಲಾಗಿದೆ.

೨೧-೮-೧೯೮೫ ರಂದು ಎಳನಾಡು ಗ್ರಾಮದ ಶ್ರೀಯುತ ಮುರಡಿ ರಂಗಪ್ಪನವರ ಸುಮಾರು ೦.೬ ಹೆಕ್ಟೇರ್ ಜಮೀನನ್ನು ಚಿತ್ರದುರ್ಗದ ಸಣ್ಣ ನೀರಾವರಿ ವಿಭಾಗದ ಎಕ್ಸೆಕ್ಯುಟೀವ್ ಇಂಜಿನಿಯರ್ ರವರು ಖುದ್ದಾಗಿ ಬೇಟಿ ನೀಡಿ ಪರಿಕ್ಷಿಸಿದ್ದಾರೆ. ಶ್ರೀ ಮುರಡಿ ರಂಗಪ್ಪನವರು ಆರೋಗ್ಯವಾಗಿದ್ದಾರೆಂದು ಮತ್ತು ಅವರ ಜಮೀನಿನಲ್ಲಿ ತೆಂಗಿನ ಮರಗಳು ಒಳ್ಳೆಯ ಸ್ಥಿತಿಯಲ್ಲಿವೆ ಎಂದು ತಿಳಿಸಿದ್ದಾರೆ.